It has been subsequently reconstituted on 8th October 1952 enlarging the membership of the Committee.

ಶ್ರೀ ಜಿ. ನಾರಾಯಣಗೌಡ.—ಈ ಸಮಿತಿಯು ಪುನರ್ರಚನೆಯಾಗಲು ಇದ್ದ ಪ್ರಬಲವಾದ ಕಾರಣಗಳೇನು ?

ಶ್ರೀ ಕಡಿದಾಳ್ ಮಂಜಪ್ಪ.—ತಮಗೆಲ್ಲಾ ತಿಳಿದಿರುವಂತೆ ಮೈಸೂರಿನಲ್ಲಿ ಒಂದು ಕಾನ್ಫರೆನ್ಸ್ ಆಯಿತು. ಆ ಕಾನ್ಫರೆನ್ಸ್‌ನಲ್ಲಿ ಈ ಸಮಿತಿಯ ಸದಸ್ಯತ್ವವನ್ನು ಇನ್ನೂ ವಿಸ್ತರಿಸಬೇಕೆಂದು ತೀರ್ಮಾನವಾಯಿತು. ಅದರ ಪ್ರಕಾರ ಈ ಸಮಿತಿಯ ಸದಸ್ಯರ ಸಂಖ್ಯೆಯನ್ನು ಜಾಸ್ತಿ ಮಾಡಿದ್ದೇವೆ.

ಶ್ರೀ ಜಿ. ನಾರಾಯಣಗೌಡ.—ಈ ಸಮಿತಿಯು ಪ್ರಥಮತಃ ರಚನೆಯಾದಾಗ ಆದಷ್ಟು ಬೇಗನೆ ಅಲ್ಲಿನ ವರಿಗೆ ಪರಿಹಾರವನ್ನು ಕೊಡಬೇಕೆಂಬ ಉದ್ದೇಶದಿಂದ ಅದರ ಬಗ್ಗೆ ತೀರ್ಮಾನ ಮಾಡಲು ತಾನೆ ಆಗಿದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಅದರ ಬಗ್ಗೆ ಸಲಹೆ ಕೊಡುವುದಕ್ಕೆ.

ಶ್ರೀ ಜಿ. ನಾರಾಯಣಗೌಡ.—ಅದೆಷ್ಟು ಸಾರಿ ಸೇರಿತ್ತು ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಸಾರಿ.

ಶ್ರೀ ಜಿ. ನಾರಾಯಣಗೌಡ.—ಏನಾದರೂ ಸಲಹೆ ಕೊಟ್ಟಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಲಹೆಗಳನ್ನು ಮಾಡಿದ್ದಾರೆ. ಪುನಃ 23ನೆಯ ತಾರೀಖಿಗೆ ಸೇರಬೇಕೆಂದು ತೀರ್ಮಾನವಾಗಿತ್ತು.

ಶ್ರೀ ಜಿ. ನಾರಾಯಣಗೌಡ.—ಆ ಸಲಹೆಯೇನೆಂಬುದನ್ನು ಹೇಳಬಲ್ಲರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಹೇಳಲಾರೆ.

ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಈ ಕಮಿಟಿಯು ಪುನರ್ವ್ಯವಸ್ಥಿತವಾಯಿತೆಂದು ಉತ್ತರ ಕೊಟ್ಟಿದ್ದೀರಿ. ಮೊದಲಿದ್ದ ಕಮಿಟಿಗಿಂತ ಈ ಕಮಿಟಿಗೆ ಎಷ್ಟು ಜನ ಜಾಸ್ತಿ ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು 14.

ಶ್ರೀ ಎಂ. ಲಿಂಗಣ್ಣ.—ಅಂದರೆ ಒಟ್ಟು ಸಂಖ್ಯೆ ಎಷ್ಟೆಂಬುದನ್ನು ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—I will get you that information later.

**Sri M. LINGANNA.**—Are the members of this Committee allowed travelling allowance and also other remuneration ?

*ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಈ ಕಮಿಟಿಯ ಕೆಲಸವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದು Government Order ನಲ್ಲಿ ನಮೂದಾಗಿದೆ. ಅದು ಏನು ಎಂದು ಹೇಳುತ್ತೇನೆ. ಸರ್ಕಾರಕ್ಕೆ ಕ್ಷಾಮ ಪರಿಹಾರದ ವಿಚಾರವಾಗಿ ಸಲಹೆ ಮಾಡುವುದು ಮತ್ತು ಕ್ಷಾಮ ಪರಿಹಾರಕ್ಕೆ ಸಂಬಂಧಪಟ್ಟ ನಿಧಿಯನ್ನು ವಸೂಲು ಮಾಡುವ ವಿಚಾರದಲ್ಲಿ ಸಲಹೆ ಮಾಡುವುದು, ಇವೇ ಮೊದಲಾದ ಕೆಲಸಗಳು.

**Sri M. PALANIYAPPAN** (Ulsoor).—Have the Government constituted District Relief Committees ?

**Sri Kadidal MANJAPPA.**—Please repeat your question.

**Sri M. PALANIYAPPAN.**—Are the Government aware that they have constituted D strict Relief Committees ?

**Sri Kadidal MANJAPPA.**—Yes.

**Sri M. PALANIYAPPAN.**—May I know the relationship between the Central Relief Committee and the District Relief Committee ?

**Sri Kadidal MANJAPPA.**—The suggestions of the District Relief Committee will also be taken into account by the Central Relief Committee.

**Sri M. PALANIYAPPAN.**—Have the Government taken any members of the District Relief Committee into the Central Committee ?

**Sri Kadidal MANJAPPA.**—No.

**Sri M. PALANIYAPPAN.**—How do you then expect any relationship between these two committees ?

**Sri Kadidal MANJAPPA.**—There is the Deputy Commissioner who will forward the suggestions of the local committees.

---

## District Relief Measures in Chitaldrug District.

*Q.*—156. **Sri G. SHIVAPPA** (Holalkere).—

Will the Government be pleased to state ;—

(*a*) the measures taken to relieve the distress in Chitaldrug District ;

(*b*) total amount given under relief and grow more food scheme ;

(*c*) whether it is not necessary to continue the relief works ?

*A.*—**Sri Kadidal MANJAPPA** (Minister for Revenue and Public Works).—

(*a*) (1) Starting of relief works.
(2) Grant of remissions.
(3) Grant of loans.
(4) Import and distribution of fodder.
(5) Other measures—

(i) Starting milk distribution centres.

(ii) Supply and distribution of multi-vitamin tablets

(iii) Supply of free clothing to destitutes.

(SRI KADIDAL MANJAPPA.)

(iv) Grant of cash doles to destitutes.

(6) Starting of Relief works by Public Works Department.

(*b*) (1) Under relief Rs. 1,83,000.

(2) Under Grow More Food Rs. 3,74,500.

(*c*) This is under examination.

ಶ್ರೀ ಜಿ. ಶಿವಪ್ಪ.—(*a*) ಗೆ ಉತ್ತರವಾಗಿ (3) ರಲ್ಲಿ ಸಾಲಗಳನ್ನು ಕೊಡಲಾಗಿದೆ ಎಂದು ಹೇಳಿದೆ. ಎಷ್ಟು ಸಾಲ ಕೊಟ್ಟಿದೆ ಎಂದು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—Land Improvement loans 10,000 ರೂಪಾಯಿಗಳು; Takkavi loans 85,000 ರೂಪಾಯಿಗಳು ಮತ್ತು well subsidy 50,000 ರೂಪಾಯಿಗಳು.

ಶ್ರೀ ಜಿ. ಶಿವಪ್ಪ.—ಹೋದ ವರ್ಷ ಕೂಡಾ ಇಷ್ಟೇ ಕೊಟ್ಟಿದೆ ಎಂದು ಭಾವಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಹೋದ ವರ್ಷ ಅಷ್ಟು ಕೊಟ್ಟಿಲ್ಲ, ಕಡಮೆ ಕೊಟ್ಟಿದೆ.

ಶ್ರೀ ಜಿ. ಶಿವಪ್ಪ.—ಕ್ಷಾಮಕೋಸ್ಕರ ಈ ವರ್ಷ ಜಾಸ್ತಿ ಕೊಟ್ಟಿಲ್ಲ ಎಂದು ಭಾವಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಕ್ಷಾಮಕ್ಕೋಸ್ಕರ ಜಾಸ್ತಿ ಕೊಡಲಾಗಿದೆ.

ಶ್ರೀ ಜಿ. ಶಿವಪ್ಪ.—Distribution of fodderಗೆ ಎಷ್ಟು ಖರ್ಚಾಗಿದೆ ಎಂದು ಹೇಳುವುದಕ್ಕೆ ಸಾಧ್ಯವೇ?

ಶ್ರೀ ಕಡಿದಾಳ್ ಮಂಜಪ್ಪ.—Notice.

ಶ್ರೀ ಜಿ. ಶಿವಪ್ಪ.—ಇದರಲ್ಲಿ ವಿತರಿತ fodder ಹಾಗೆಯೇ ಉಳಿದಿದೆ; ಮಳೆ ಬಂದ ಮೇಲೆ ಖರ್ಚಾಗಿಲ್ಲ. ಇದನ್ನು ಖರ್ಚುಮಾಡುವುದಕ್ಕೆ ಯಾವ ಕಾರ್ಯಕ್ರಮ ತಗೆದುಕೊಳ್ಳುತ್ತೀರಿ ಎಂದು ಹೇಳುವುದಕ್ಕೆ ಸಾಧ್ಯವೆ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಸಂಪೂರ್ಣವಾಗಿ ಸಂದರ್ಭದ ಮೇಲೆ ಅವಲಂಬಿಸಿದೆ. ಯಾವ ಕಾರ್ಯಕ್ರಮ ತಗೆದುಕೊಳ್ಳುತ್ತೇವೆ ಎಂದು ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಶಿವಪ್ಪ.—ಇದರಿಂದ ಸರ್ಕಾರದವರಿಗೆ ಲುಕ್ಸಾನಾಗುತ್ತದೆ. ಆದ್ದರಿಂದ 4 ಪೌಂಡು ಪ್ರಕಾರ ಮಾಡಿದರೆ ಸರ್ಕಾರಕ್ಕೆ ಉಳಿತಾಯವಾಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯವೇ?

**Sri Kadidal MANJAPPA.**—It is a matter of opinion.

ಶ್ರೀ ಜಿ. ಶಿವಪ್ಪ.—ರಿಲೀಫ್ ಕಾರ್ಯಗಾರಿಗಳಿಗಾಗಿ 1,83,000 ರೂಪಾಯಿಗಳನ್ನು ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ. ಯಾವ ತಾರೀಖಿನಿಂದ ಯಾವ ತಾರೀಖಿನ ವರೆಗೆ ಕೊಟ್ಟಿದ್ದೀರಿ ಎಂದು ಹೇಳುತ್ತೀರಾ?

**Sri Kadidal MANJAPPA.**—I cannot give you the exact dates.

ಶ್ರೀ ಜಿ. ಶಿವಪ್ಪ.—ಮೊನ್ನೆ ಮೈಸೂರು conference ಆದ ಮೇಲೆ 1,25,000 ರೂಪಾಯಿಗಳನ್ನು ಕೊಟ್ಟಿದೆ ಎಂದು ಒಂದು Press Noteನಲ್ಲಿ ನೋಡಿದ ಹಾಗಿತ್ತು. ಆ ಹಣ ಇದರಲ್ಲಿ ಸೇರಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಸೇರಿಲ್ಲ.

ಶ್ರೀ ಜಿ. ಶಿವಪ್ಪ.—ಅದರ ವಿಚಾರ ಏನಾಯಿತು ಎಂದು ತಿಳಿದುಕೊಳ್ಳುವುದಕ್ಕೆ ಸಾಧ್ಯವೆ?

ಶ್ರೀ ಕಡಿದಾಳ್ ಮಂಜಪ್ಪ.—ಆ ಹಣ Distress Relief Commissioner ಸ್ವಾಧೀನದಲ್ಲಿ ಇದೆ. ಅವರು ನೋಡಿಕೊಂಡು ಖರ್ಚುಮಾಡುತ್ತಾರೆ.

ಶ್ರೀ ಜಿ. ಶಿವಪ್ಪ.—ಜಾಗ್ರತೆ ನಮ್ಮ ಡಿಸ್ಟ್ರಿಕ್ಟ್‌ಗೆ ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೋಸ್ಕರ 5·112 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ತಮ್ಮ ಒಂದೇ ಡಿಸ್ಟ್ರಿಕ್ಟ್‌ಗೆ ಅಲ್ಲ.

ಶ್ರೀ ಜಿ. ಶಿವಪ್ಪ.—ಹೆಚ್ಚು ಆಹಾರವನ್ನು ಬೆಳೆಯುವ ಯೋಜನೆಗಾಗಿ 3,74,500 ರೂಪಾಯಿಗಳನ್ನು ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ. ಅದು ಎಲ್ಲಾ ಭಾಗಗಳಿಗೂ ಅನ್ವಯವಾಗುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಿಜ. ಎಲ್ಲಾ ಭಾಗಗಳಿಗೂ ಅನ್ವಯವಾಗುವುದಿಲ್ಲ.

ಶ್ರೀ ಜಿ. ಶಿವಪ್ಪ.—ಅದಕ್ಕೋಸ್ಕರವಾಗಿ ಕೆರೆಗಳ ಸಂಖ್ಯೆ ಚಿತ್ರದುರ್ಗದಲ್ಲಿ ಒಹಳ ಕಡಮೆ ಇರುವುದರಿಂದ ಹೆಚ್ಚಾಗಿ relief ಕಾರ್ಯಗಾರಿಗಳಿಗೆ ಖರ್ಚು ಮಾಡುವುದು ಒಳ್ಳೆಯದು ಎಂದು ತಮಗೆ ತಿಳಿದುಬಂದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ತಿಳಿದು ಬಂದಿದೆ.

---

*Delay in supply of Questions and Answers sets to Members.*

**Sri A. BHEEMAPPA NAIK** (Molakalmuru).—Mr. Speaker, we are not getting printed sets of questions and answers at all. Even now they are not being sent to us. I do not know what the matter is.

**Mr. SPEAKER.**—They were distributed in the morning, I suppose.

**Sri J. MOHAMED IMAM** (Jagalur).—They have not been sent to us also.

**Sri A. BHEEMAPPA NAIK.**—I fully agree with my friend opposite.

**Sri J. MOHAMED IMAM.**—The usual practice is to get the questions and answers on the previous day. Today, we received it just before we left our place.

**Sri B. HUTCHE GOWDA** (Turuvekere).—This can be discussed after question hour.

**Mr. SPEAKER.**—It has been brought to the notice of the Government.

---